Regd No BG. 165 6-10-1969

SATYAVADI Daily MYSORE 4 ★ 53 rd Year of Publication

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಖಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ದಸರಾ ವಸ್ತುಪ್ರದರ್ಶನದಲ್ಲಿ ಅರಬತ್ತಲೆ ಡಾನ್ಸ್ ನಿಷೇಧಿಸಿ

ರಾಂರ ರಾಜೀನಾಮೆ

ನವದೆಹಲಿ— 10 ವರ್ಷ ಆಡಳಿತದಿಂದ ಪಟ್ಟಕೊಡವಿರುವ ಆಹಾರ ಮಂತ್ರಿ ಜಗಜೀವನ ರಾಂರವರು ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕೆಂದು ಬುಧವಾರ ಪಾರ್ಲಿಮೆಂಟು ಅಧಿವೇಶನದಲ್ಲಿ ಸಂಯುಕ್ತ ವಿರೋಧ ಪಕ್ಷಗಳು ಕೇಳಿಕೆ ಹಾಕಲಿವೆ.

ಪಾನನಿರೋಧ

ಮದರಾಸು— ಜನತೆ ಹಿತಕ್ಕಾಗಿ ಪಾನನಿರೋಧ ಮುಂದುವರಿಸುವದಾಗಿ ಮುಖ್ಯ ಮಂತ್ರಿ ಕರುಣಾನಿಧಿ ಹೇಳಿದರು

ಗೆಜಟ್ ಉಚಿತ

ಬೆಂಗಳೂರು— ರಾಜ್ಯದ ಗೆಜಟ್ಟನ್ನು ಹಲವು ಸಂಸ್ಥೆಗಳಿಗೆ ಉಚಿತವಾಗಿ ಕೊಡಲು ಮಂತ್ರಿಮಂಡಲ ನಿರ್ಧರಿಸಿದೆ.

ಹೀಗಾಯಿತೆ

ಬೆಂಗಳೂರು— 1957 ಅಕ್ಟೋಬರಿನಲ್ಲಿ ಕಾಲಕ್ಕೆ ಮುಂಚಿನಾಗಿ ನಿವೃತ್ತಿಗೊಳಿಸಲ್ಪಟ್ಟ ಒಬ್ಬ ಹೆಡ್ಕಾನ್ಸ್ಟೇಬರು ವಿಷಯ ವಿಚಿತ್ರವೆನ್ನುವ ಕಮಿಷನರಿಗೆ ತಿಳಿಸಲಾಗಿತ್ತು. ಕಮಿಷನರು ಅವರಿಗೆ ಕೊಡಬೇಕಾದ 12 ವರ್ಷದ ಬಾಕಿ ಮತ್ತು ಪೆನ್ಷನ್ ಮಂಜೂರ್ಮಾಡಿದಾರೆ.

ಸಕ್ಕರೆ

ಮೈಸೂರು— ದಸರಾ ಪ್ರಯುಕ್ತ ದೊಡ್ಡವರಿಗೆ ಒಂದೂವರೆ ಕಿಲೋ ಚಿಕ್ಕವರಿಗೆ ಮುಕ್ಕಾಲು ಕಿಲೊ ದೊರೆಯುವದು.

★ಪದ್ಮಭೂಷಣ ನೇತ್ರದಾನಿ ಡಾ || ಎಂ ಸಿ ಮೋದಿಯವರು ರಾಷ್ಟ್ರಾಧ್ಯಕ್ಷ ಶ್ರೀ ವಿ ವಿ ಗಿರಿಯವರ ಗೌ || ನೇತ್ರವೈದ್ಯರಾಗಿ ನೇಮಿಸಲ್ಪಟ್ಟರುವರು.

ಇಂದಿರಾರವರ ಹಿಂದಿನ ದಾದಿ

ಕೊಯಮುತ್ತೂರು— ಪ್ರಧಾನಿ ಇಂದಿರಾರವರ ಹಿಂದಿನ ದಾದಿಯಾಗಿದ್ದ 87 ವರ್ಷದ ಡೆನ್ಮಾರ್ಕಿನಲ್ಲಿ ಹುಟ್ಟಿದ ಮಿಸ್ ಆನ ಓರ್ಡಿಷಾಲ್ಟ್ ಇಂದಿರಾರನ್ನು ತಬ್ಬಿಕೊಂಕೆನ್ನೆಗಳಿಗೆ ತುಂಬಾ ಮತ್ತಿಟ್ಟರು – ಈಕೆಗೆ ಇಂದಿರಾರನು ಗಂಧದ ಮುರದ ಹಾರವನ್ನು ಬಹುಮಾನಿಸಿದರು

○

ಸೋಮಾರಿಗಳಿಗೆ ಜೈಲು

ಕೊಳೇಗಾಲ — ಜಪಾನಿನಲ್ಲಿರುವಂತೆ ಭಾರತದಲ್ಲೂ ಸೋಮಾರಿಗಳನ್ನು ಜೈಲಿನಲ್ಲಿರಿಸಿ ಅವರನ್ನು ರಾಷ್ಟ್ರ ಎದುರಿಸುತ್ತಿರುವ ಸಮಸ್ಯೆ ಪರಿಹಾರಕ್ಕೆ ತರಬೇತು ಮಾಡಬೇಕೆಂದು ವಯಸ್ಕರ ವಿದ್ಯಾ ಸಮಿತಿ ಮುಖ್ಯಾಧಿಕಾರಿ ಶ್ರೀ ಮುನಿಸ್ವಾಮಿ ಹೇಳಿದರು.

★

ಮುಖ್ಯ ಮಂತ್ರಿಗಳ ಉಪವಾಸ

ಅಹಮದಾಬಾದು— ಇಲ್ಲಿ ನಡೆದ ಹಿಂಸಾ ಕೃತ್ಯಗಳಿಗೆ ಪ್ರಾಯಶ್ಚಿತ್ತವಾಗಿ 82 ವರ್ಷದ ಮುಖ್ಯಮಂತ್ರಿ ಡಾ|| ಜೀವರಾಜ ಮೇಥಾ 3 ದಿನಗಳ ಉಪವಾಸ ಕೈಗೊಂಡಿರುವರು.

●

ಗಾಂಧಿ ಶತಮಾನೋತ್ಸವ

ಮದರಾಸು— ಭಾರಿ ಓಹಿರಂಗ ಸಭೆಯಲ್ಲಿ ಪ್ರಧಾನಿ ಇಂದಿರಾರು ಸ್ಫೂರ್ತಿದಾಯಕ ಭಾಷಣ ಮಾಡಿದರು – ಅದಕ್ಕೆ ಮುಂಚೆ ಅಲಂಕೃತವಾದ ಆನೆ ಮೇಲೆ ತಿಂಥೀಚಿಯವರ ದೊಡ್ಡ ಚಿತ್ರಪಟವಿಟ್ಟು ಭಾರಿ ಮೆರವಣಿಗೆ ನಡೆಯಿತು.

ವಾರ್ಷಿಕೋತ್ಸವ

ಚುದ್ರ ಕೆಫೆಯ 11 ನೇ ವಾರ್ಷಿಕೋತ್ಸವವು ಮೊನ್ನೆ ವಿಜೃಂಭಣೆಯಿಂದ ನೆರವೆರಿತು.

ರಾತ್ರಿ ಸೊಗಸಾದ ಭೋಜನಕೂಟ ನಡೆದು ಆಹ್ವಾನಿತರನ್ನು ಮಾಲೀಕರಾದ ಶ್ರೀ ಸುಬ್ರಹ್ಮಣ್ಯರಾವ್ ಮತ್ತು ಅವರ ಸಹೋದರರು ಮತ್ತು ಮಾನೇಜರ್ ಶ್ರೀ ನಾರಾಯಣ ರಾವ್‌ರವರು ಸ್ವಾಗತಿಸಿದರು. ಆಹ್ವಾನಿತರು ಅಧಿಕ ಸಂಖ್ಯೆಯಲ್ಲಿ ಆಗಮಿಸಿದ್ದರು.

——

ರೋಟರಿ

ಹುಣಸೂರು— ರೋಟರಿ ಗೌರ್ನರ್ ಶ್ರೀ ಎಸ್ ರಂಗಸ್ವಾಮಿಯವರು ಇಲ್ಲಿಗೆ ಅಧಿಕೃತ ಭೇಟಿ ಕೊಟ್ಟ ಸಂದರ್ಭದಲ್ಲಿ ಶನಿವಾರ ಸಂಜೆ ರೋಟರಿ ಕ್ಲಬ್ಬಿನವರು ಸಮಾರಂಭ ಏರ್ಪಡಿಸಿದ್ದರು.

——

ಗಾಂಧಿ ಶತಮಾನೋತ್ಸವ

ಬದನವಾಳು— ಖಾದಿ ಮತ್ತು ಗ್ರಾಮೋದ್ಯೋಗ ಸಂಘದ ವತಿಯಿಂದ ಗಾಂಧಿ ಶತಮಾನೋತ್ಸವವನ್ನು ಆಚರಿಸಲಾಯಿತು.

○

ಇಲ್ಲೀ ಹೆಚ್ಚು ಮಹಿಳೆಯರು

ಬೊಂಬಾಯಿ— ಭಾರತದ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ 45 ಮಂದಿ ಮಹಿಳೆಯರಿರುವೆಂದೂ, ಅಮೇರಿಕಾದ ಶಾಸಭೆಯಲ್ಲಿ ಕೇವಲ 11 ಮಂದಿ ಮಹಿಳೆಯರಿರುವೆಂದೂ ಅಮೇರಿಕಾ ರಾಯಭಾರಿ ಕೆನೆತ್ ಕೀಟಿಂಗ್ ಹೇಳಿದರು

ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಮೈಸೂರು ನಗರದ ಜನತೆ ತಲೆ ಎತ್ತುವಂತಿರಲಿಲ್ಲ. ಜೀವಣ್ಣರಾಯನ ಕಟ್ಟೆ ದಸರಾ ವಸ್ತುಪ್ರದರ್ಶನದಲ್ಲಿ ನಾಡಿನ ಜನಕೋಟಿಗೆ ಅನ್ನನೀಡುವ ನಾನಾ ಕೈಗಾರಿಕಾ ಕ್ಷೇತ್ರಗಳ ಮಾದರಿ ಎಂದು ಭಾವಿಸಿ, ನೋಡಿ ಆನಂದಿಸಿ ಬರುತ್ತಿದ್ದ ಜನ, 2 ವರ್ಷಗಳ ಹಿಂದೆ ಪ್ರವೇಶ ದ್ವಾರದ ಎತ್ತ ಇತ್ತ ನೋಡಿದರೆ ಕೇಳುತ್ತಿದ್ದುದು–ನೋಡಿ ಆನಂದಿಸಿ. ಹೆಂಗಸರ ಅಂಗಾಂಗ ಸೌಂದರ್ಯ ಇತ್ಯಾದಿ ಪ್ರಚಾರ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಯಾವ ಸ್ಟಾಲ್‌ಗೂ ಆಗದ ಕಲೆಕ್ಷನ್ ಆ ಸ್ಟಾಲ್‌ಗಳಿಗಿ. ಮತ್ತೇನೂ ಅಲ್ಲ ಆ ಸ್ಟಾಲ್‌ಗಳು. ರಿಕಾರ್ಡ್ ಡಾನ್ಸ್ ಸ್ಟಾಲ್‌ಗಳು. 6 ರಿಕಾರ್ಡ್‌ಗಳಿಗೆ 1 ರೂ. ಟಿಕೆಟ್‌ರದ ರೂ. 2 ಮತ್ತು 1. ರಿಕಾರ್ಡ್‌ಗಳಿಗೆ ತಕ್ಕಂತೆ ಕುಣಿದು ಜನಮನ ತಣಿಸುವ ಭಾವನೆಯುಳ್ಳ ಹುಡುಗಿಯರು ಅರಬತ್ತಲೆ ದಿರುಸು ಧರಿಸಿ ಅಶ್ಲೀಲ ಭಾವಭಂಗಿಗಳಲ್ಲಿ ಡಾನ್ಸ್ ಮಾಡುತ್ತಿದ್ದುದು ಸಾಮಾನ್ಯ ಪ್ರಾಪ್ತ ವಯಸ್ಕರು, ವಯಸ್ಕರಾದವರು ತಲೆಬಗ್ಗಿಸಿಕೊಂಡು ಕ್ಯೂನಲ್ಲಿ ನಿಂತು ಟಿಕೆಟ್ ಪಡೆಯುತ್ತಿದ್ದರು.

ಈ ತರಹೆ ಸ್ಟಾಲ್ ಕಳೆದ ಪ್ರದರ್ಶನದಲ್ಲಿ ಒಂದೇ ಇತ್ತು. ಇದೇ ಪ್ರಚಾರ. ಇದೇ ನೃತ್ಯ. ಇದೇ ಭಾವಭಂಗಿ. ಅತ್ತ ಕಡೆ ಪ್ರೇಕ್ಷಕ ಹೆಂಗಸರು ಸುಳಿಯುತ್ತಿರಲಿಲ್ಲ. ಅರನಗ್ನತೆಯ ಹೆಣ್ಣಿನ ಚಿತ್ರ ನೋಡಿ, ಜನರನ್ನು ಆಕರ್ಷಿಸಲು ಮಧ್ಯೆ ಮಧ್ಯೆ ತೆರೆ ಎತ್ತುತ್ತಿದ್ದುದನ್ನು ಹೊರಗೆ ನೋಡಿ ಹೆಂಗಸರು ಅತ್ತ ಕಡೆ ಹೇಗೆ ಹೋದಾರು ?

ವಸ್ತುಪ್ರದರ್ಶನ ಸಮಿತಿ ಈ ಬಾರಿ ಈ ಡಾನ್ಸ್‌ಗೆ ಅವಕಾಶ ನೀಡಬಾರದು.

ಖಟ್ಮಂಡು— ಭೂತಾನಿಗೆ ಬರುವ ಭಾರತ ಪದಾರ್ಥಗಳ ಮೇಲೆ ತೆರಿಗೆ ವಿಧಿಸಲು ಭೂತಾನು ಸರ್ಕಾರ ನಿರ್ಧರಿಸಿದೆ.

ಕಣ್ಣು ದಾನಾ

ಹೈದರಾಬಾದು— ಕೇಂದ್ರ ಆರೋಗ್ಯ ಮಂತ್ರಿ ಶ್ರೀ ಚಂದ್ರಶೇಖರ್ ಮತ್ತು ಆಂಧ್ರ ಮುಖ್ಯ ಮಂತ್ರಿ ಬ್ರಹ್ಮಾನಂದ ರೆಡ್ಡಿಯವರು ಸರೋಜಿನಿದೇವಿ ಆಸ್ಪತ್ರೆ ಕಣ್ಣು ನಿಧಿಗೆ ತಮ್ಮ ಕಣ್ಣನ್ನು ದಾನಾಮಾಡಿದಾರೆ

★

ಎಲೆಕ್ಟ್ರಿಸಿಟಿ ಬೋರ್ಡಿನ ನಷ್ಟ

ನವದೆಹಲಿ— ಮೈಸೂರು ಎಲೆಕ್ಟ್ರಿಸಿಟಿ ಬೋರ್ಡುಗಳಿಗೆ 1966 ರಿಂದ 1069 ರವರೆಗೆ 3 ವರ್ಷಗಳಲ್ಲಿ ರೂ 77 66 ಕೋ ನಷ್ಟವಾಗಿದೆಯೆಂದು ಪ್ರಕಟವಾಗಿದೆ.

★

ಪ್ರಧಾನಿಯವರಿಗೆ ಹುಡುಗನ ಕಾಣಿಕೆ

ತಿರುಚಿ— ಪ್ರಧಾನಿ ಇಂದಿರಾರವರಿಗೆ ಇಲ್ಲಿ ದೊರೆತ ಅನೇಕ ಹಾರವಿನ ಹಾರಗಳ ಜೊತೆಗೆ, ಮಾಜಿ ಪಾರ್ಲಿಮೆಂಟು ಸದಸ್ಯ ಶ್ರೀ ವೀರಾಸ್ವಾಮಿಯವರ 10 ವರ್ಷದ ಮಗ 44 ಅರ್ಧ ರೂಗಳ ನೆಹ್ರೂ ನಾಣ್ಯಗಳ ಪೊಟ್ಟಣ ಕೊಟ್ಟು ಪ್ರಧಾನಿಯವರ ಹುಟ್ಟು ಹಬ್ಬದಂದು ಕೊಡಲು ತಾವು ತೀಕುರಿಸುತ್ತಿರುವದಾಗಿ ಹೇಳಿದನು. ಪ್ರಧಾನಿ ಇಂದಿರಾರು ಅವನನ್ನು ಪ್ರೀತಿಯಿಂದ ಅಪ್ಪಿಕೊಂಡರು.

○

ಹೊಸ ಚಳವಳಿ

ಹೈದರಾಬಾದು— ಶುಕ್ರವಾರದಿಂದ 9 ಪಾಯಿಂಟ್ ಕಾರ್ಯಕ್ರಮದ ಸಾಮೂಹಿಕ ಸತ್ಯಾಗ್ರಹ ಹೂಡಲಾಗುವುದೆಂದು ಪ್ರಜಾ ಸಮಿತಿ ಪ್ರಕಟಿಸಿದೆ.

★

ಪ್ರಾಮಾಣಿಕತೆ

ಬೆಂಗಳೂರು— ನೀಲಸಂದ್ರ ಮೌಂಟ್ ರೇಂಜು ಮಿಲ್ಲಿಟರಿ ಆಫೀಸರು ಶ್ರೀ ಬಿಂದ್ರ ಬ್ಯಾಂಕಿನಲ್ಲಿ ರೂ 44000 ತೆಗೆದುಕೊಂಡಾಗ ಕ್ಯಾಷಿಯರು ತಪ್ಪಾಗಿ ರೂ 66000 ತಪ್ಪಾಗಿ ಕೊಟ್ಟರು. ಶ್ರೀ ಬೇಂದಿ ಶಿಬಿರಕ್ಕೆ ಬಂದಾಗ ಇದು ಗೊತ್ತಾಯಿತು : ಆವರು ಹೆಚ್ಚಾದ ರೂ 22000 ಬ್ಯಾಂಕಿಗೆ ಪಲ್ಲಿಸಿ ಶುದ್ಧ ಆತ್ಮಸಾಕ್ಷಿಯಿಂದ ವಾಪಸ್ ಬಂದರು.

★

ರೂ 3 ಲಕ್ಷ ನಿಧಿ ಅರ್ಪಣೆ

ಮಡಕೇರಿ— ಮುಂದಿನ ಜನವರಿಯಂದು ಜಿ॥ ಕೆ ಎಂ ಕಾರಿಯಪ್ಪನವರ 70 ನೆನೆ ಜನ್ಮದಿನೋತ್ಸವವೆಂದು ರೂ 3 ಲಕ್ಷ ನಿಧಿ ಅರ್ಪಿಸಲು ಕೊಡಗು ಜಿಲ್ಲಾ ಮಾಜಿ ಸೈನಿಕರು ನಿರ್ಧರಿಸಿರುವರು.

ಜೋಡಿಗೆ ಪ್ರಶಸ್ತಿ

ಮಾಸ್ಕೋ— ಅಂತರರಾಷ್ಟ್ರೀಯ ಜೋಡಿನ ಪ್ರದರ್ಶನದಲ್ಲಿ ಭಾರತ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷ್ ಮತ್ತಿತರ ಸಂಸ್ಥೆಗಳಿಗೆ ಪ್ರಶಸ್ತಿ ಡಿಪ್ಲೊಮ ದೊರೆಯಿತು.

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆರೂ 2

ವುಡ್‌ಲ್ಯಾಂಡ್ಸ್ ಜಯಪ್ರದ 4ನೇ ವಾರ

— ಆತ್ಯಾಕರ್ಷಣೀಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರೀಖ್, ಓಂ ಪ್ರಕಾಶ್-ಮುದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಈ ದಿವಸ

.... ಚಿತ್ತಾಕರ್ಷ ಹಿಂದಿ ಚಿತ್ರ ....

ಮಾಧವಿ -

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

ಕುಟುಂಬ ಯೋಜನೆ

ಮಾಡಿ

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore